# 12

# ವ್ಯವಸ್ಥಾಪನೆ

ನಾವು ಆಸ್ಟ್ರೇಲಿಯಾದಲ್ಲಿ ವಾಸಿಸುತ್ತಿದ್ದಾಗ, ಅಲ್ಲಿ ಮಾರ್ಪಾಟು ಹೊಂದಿದ್ದ ಒಂದು ಕುಟುಂಬವು ಕೆಲಸಮಯದವರೆಗೆ ನಂಬಿಗಸ್ತಿಕೆಯುಳ್ಳದ್ದಾಗಿತ್ತು, ಆದರೆ ವೆಕೇಶನ್ ಬೈಬಲ್ ಸ್ಕೂಲಿನ ನಂತರ, ಆರಾಧನೆಗಳಲ್ಲಿ ಭಾಗವಹಿಸುವದನ್ನು ನಿಲ್ಲಿಸಿಬಿಟ್ಟಿತು. ಯಾಕೆ ಎಂದು ನಾವು ಅವರನ್ನು ಕೇಳಿದಾಗ, ಅವರು ಹೀಗೆ ಹೇಳಿದರು, "ನಾವು ನಿಮ್ಮೊಂದಿಗೆ ಆರಾಧಿಸಲು ಮೊದಲು ಪ್ರಾರಂಭಿಸಿದಾಗ, ದೇವರ ಸೇವೆ ಮಾಡಲು ಪ್ರಯತ್ನಿಸುವವರ ಕೇವಲ ಕ್ರೈಸ್ತರ ಒಂದು ಚಿಕ್ಕ ಗುಂಪಾಗಿರುವಿರಿ ಎಂದು ಯೋಚಿಸಿದೆವು. VBSದಲ್ಲಿ ನೀವು ಸಾಹಿತ್ಯ ಕ್ಲಾಸುಗಳ ಬೋಧಕರು, ಕಾರ್ಯಕ್ರಮ ಮತ್ತು ಪ್ರತಿಯೊಂದನ್ನು ಒಳಗೊಂಡು ಸಂಘಟಿಸಲ್ಪಟ್ಟಿರುವಿರೆಂದು ನಾವು ತಿಳಿದು ಕೊಂಡೆವು. ನಾವು ಅದಕ್ಕಾಗಿ ಮುನ್ನೋಡುತ್ತಿರಲಿಲ್ಲ."

ಸಂಘಟಿಸುವದರ ಬಗ್ಗೆ ಯಾವುದೂ ಪರಿಶುದ್ಧ ಬರಹಕ್ಕೆ ವಿರುದ್ಧವಾದದ್ದಾಗಿರುವದಿಲ್ಲ. ಸೃಷ್ಟಿಯ ದಾಖಲೆಯು ಸಂಘಟನೆಯ ಬಗ್ಗೆ ಮಾತಾಡುತ್ತದೆ: ದೇವರು ಆರು ದಿನಗಳನ್ನು ಉಪಯೋಗಿಸಿದನು. ಪ್ರತಿ ದಿನದ ಸೃಷ್ಟಿಯು ಮೊದಲು ಸೃಷ್ಟಿಸಿದ್ದರ ಮೇಲೆ ಅವಲಂಭಿಸಿತ್ತು ಹಾಗೂ ಅನಂತರ ಬಂದದ್ದನ್ನು ನಡಿಸಿತು. ನಾವು ಇತರ ಬೈಬಲಿನ ಉದಾಹರಣೆಗಳನ್ನು ನೋಡುತ್ತೇವೆ: ಇಸ್ರಾಯೇಲ್ಯರು ಸಿನಾಯಿಯಿಂದ ವಾಗ್ದತ್ತ ದೇಶಕ್ಕೆ ಹೋಗಲು ಸಿದ್ಧರಾದಾಗ, ಅವರು ಪ್ರಯಾಣಕ್ಕೆ ಹೇಗೆ ಸಂಘಟಿಸಲ್ಪಡಬೇಕೆಂಬುದರ ಬಗ್ಗೆ ನಿರ್ದೇಶಿಸಲ್ಪಟ್ಟರು (ಅದಿಕಾಂಡ 1-10; ನೋಡಿರಿ ಅಪೊಸ್ತಲರ ಕೃತ್ಯಗಳು 6:1-6).

ದೇವರು ಸಂಘಟಿತ ಯೋಜಿಸುವಿಕೆಯನ್ನು ಉಪಯೋಗಿಸಿದ್ದರಿಂದ, ಸಭೆಯು ತನ್ನ ಗುರಿಗಳನ್ನು ಸಾಧಿಸಲಿಕ್ಕೆ ತನ್ನ ಕೆಲಸವನ್ನು ಸಂಘಟಿಸದೆ ಒಂದು ಸಮಸ್ಯೆಯಿಂದ ಮುಂದಿನದಕ್ಕೆ ಎಡವಿ ಬೀಳುವಾಗ ಆತನು ಸಂತುಷ್ಟನಾಗುವದಿಲ್ಲ. ಗುರಿಗಳನ್ನು ನೆರವೇರಿಸಲಿಕ್ಕೆ ಸಂಘಟಿಸುವುದು ವ್ಯವಸ್ಥಾಪನೆಯ ಕಾರ್ಯವಾಗಿದೆ. ಸಭೆಯ ನಾಯಕರು - ಹಿರಿಯರನ್ನೊಳಗೊಂಡು, ಆದರೆ ಸಭೆಯ ವಿವಿಧ ಸೇವೆಗಳಿಗೆ ಅಧಿಕಾರದಲ್ಲಿಡಲ್ಪಡ ಬಹುದಾದ ಇತರರನ್ನೂ ಸಹ ಒಳಗೊಂಡು - ವ್ಯವಸ್ಥಾಪನೆಯ ಕೌಶಲ್ಯಗಳ ಅಗತ್ಯತೆಯುಳ್ಳವರಾಗಿರುತ್ತಾರೆ. 1 ತಿಮೊಥೆ 3:4, 5 ಒಬ್ಬ ಹಿರಿಯನಿಗಾಗಿ ಅರ್ಹತೆಯಂತೆ ಕ್ರಮದ ಮೇಲೆ ಒತ್ತಡವನ್ನು ಒಳಗೊಂಡಿರುತ್ತದೆ: "ಪೂರ್ಣ ಗೌರವದಿಂದ ತನ್ನ ಮಕ್ಕಳನ್ನು ಅಧೀನದಲ್ಲಿಟ್ಟುಕೊಂಡು ಸ್ವಂತ ಮನೆಯವರನ್ನು ಚೆನ್ನಾಗಿ ಆಳುವವನಾಗಿರಬೇಕು (ಸ್ವಂತ ಮನೆಯವರನ್ನು ಆಳುವದಕ್ಕೆ ತಿಳಿಯದವನು ದೇವರ ಸಭೆಯನ್ನು ಹೇಗೆ ಪ್ರಾರಂಭಿಸುವನು?)."

ಈ ಪಾಠವು ನಾಲ್ಕು ಕೌಶಲ್ಯಗಳನ್ನು ಚರ್ಚಿಸುತ್ತದೆ: ಯೋಜಿಸುವುದು, ಸಂಘಟಿಸುವುದು, ಆಡಳಿತ ಮಾಡುವುದು, ಮತ್ತು ಮೌಲ್ಯ ಮಾಪನ ಮಾಡುವುದು.

## ಯೋಜಿಸುವುದು

ಸಭೆಯ ನಾಯಕರು - ಸಭೆಯ ಗುರಿಗಳನ್ನು ತೀರ್ಮಾನಿಸಿದ ನಂತರ, ಆದರೆ ಆ ಗುರಿಗಳನ್ನು ಸಾಧಿಸಲಿಕ್ಕೆ ಕಾರ್ಯಗಳನ್ನು ಪ್ರಾರಂಭಿಸುವ ಮೊದಲು - ಸಭೆಯ ಕಾರ್ಯವನ್ನು ಕುರಿತು ವಿವರವಾದ ಯೋಜನೆಗಳನ್ನು ಮಾಡಬೇಕು.

ವ್ಯವಹಾರಸ್ಥರು ಬಹಳ ಮುಂಚಿತವಾಗಿಯೇ ಯೋಜನೆ ಮಾಡುವರು; ಕರ್ತನ ಕಾರ್ಯದಲ್ಲಿ ಒಳಗೊಂಡಿರುವವರು, "ಜಗತ್ತಿನಲ್ಲಿ ಅತೀ ದೊಡ್ಡ ಕಾರ್ಯದಲ್ಲಿ"

ಒಳಗೊಂಡಿರುವವರು, ಭವಿಷತ್ತಿಗಾಗಿ ಯೋಜನೆಗಳನ್ನು ಮಾಡಬಾರದೋ? ಯೋಜನೆಯಿಲ್ಲದೆ ಸಭೆಯನ್ನು ನಡಿಸುವಂಥದ್ದು, ನಕಾಶವನ್ನು ನೋಡದೇ ಇಲ್ಲವೇ ಅಲ್ಲಿಗೆ ತಲುಪಲು ಏನನ್ನು ತೆಗೆದು ಕೊಳ್ಳುತ್ತದೆ ಎಂಬುದನ್ನು ತಿಳಿಯದೇ ಪ್ರಯಾಣ ಹೊರಡುವಂತಿರುತ್ತದೆ. ಬೈಬಲಿನ ಉದಾಹರಣೆಗಳನ್ನು ಉಪಯೋಗಿಸುವುದಾದರೆ, ಅದು ಕಟ್ಟಲಿಕ್ಕೆ ಪ್ರಾರಂಭಿಸಿ ಆದರೆ ಮುಗಿಸಲಿಕ್ಕೆ ಸಾಕಷ್ಟು ಸಲಕರಣಿಗಳು ಇಲ್ಲದಂತಿರುತ್ತದೆ ಇಲ್ಲವೇ ಜಯಿಸಲು ಸಾಕಷ್ಟು ಜನ ಸೈನಿಕರನ್ನು ತೆಗೆದು ಕೊಳ್ಳದೇ ಯುದ್ಧಕ್ಕೆ ಹೋಗುವಂತಿರುತ್ತದೆ (ಲೂಕ 14:28-32).

## ಗುರಿಗಳನ್ನು ಸಾಧಿಸಲಿಕ್ಕೆ

ಯೋಜಿಸುವದರಲ್ಲಿ ಒಳಗೊಂಡಿರುವವರು ಸಭೆಯ ಗುರಿಗಳನ್ನು ಮನಸ್ಸಿನಲ್ಲಿಟ್ಟು ಕೊಂಡಿರತಕ್ಕದ್ದು. ಯಾವುದನ್ನೆ ಯೋಜಿಸಿದರೂ ಅದು ಸಭೆಯ ಗುರಿಗಳನ್ನು ಸಾಧಿಸಲಿಕ್ಕೆ ಕೊಡುಗೆಯನ್ನು ಕೊಡುವಂಥದ್ದಾಗಿರಬೇಕು.

ಸ್ಪಷ್ಟವಾಗಿ, ಗುರಿ ನೇಮಿಸುವದರ ಮತ್ತು ಯೋಜಿಸುವದರ ಮಧ್ಯದಲ್ಲಿ - ಮತ್ತು ವಿಶೇಷವಾಗಿ ಕಾರ್ಯವನ್ನು ನೇಮಿಸುವದರಲ್ಲಿ ಅಥವಾ ಗುರಿಗಳನ್ನು ಏರ್ಪಡಿಸುವದರ ಮತ್ತು ಯೋಜಿಸುವದರ ಮಧ್ಯದಲ್ಲಿ ನಿಕಟ ಸಂಬಂಧವು ಅಸ್ತಿತ್ವದಲ್ಲಿರುತ್ತದೆ. ಗುರಿಗಳು ಕೈಕೊಳ್ಳಲ್ಪಡುವದರಿಂದ ನಿರ್ದಿಷ್ಟವಾದ ವಿವರಗಳನ್ನು ಒಳಗೊಂಡಿರುವಲ್ಲಿ ಆ ಯೋಜನೆಯಲ್ಲಿ ಎರಡೂ ಭಿನ್ನವಾಗಿರುತ್ತವೆ. ತೀರ್ಮಾನವು ಮಾಡಲ್ಪಟ್ಟರೆ, ಉದಾಹರಣೆಯಾಗಿ, "ಪ್ರತಿಯೊಬ್ಬ ಸಂದರ್ಶಕನು ಸಂದರ್ಶಿಸಲ್ಪಡುವನು," ಎಂದರೆ ಆಗ ಅದು "ಕೃತ್ಯದ ಗುರಿಯಾಗುತ್ತದೆ" ಅದು ಹೇಗೆ ಸಾಧಿಸಲ್ಪಡುತ್ತದೇ? ಯೋಜನೆಯು ಇಂಥ ಪ್ರಶ್ನೆಗಳನ್ನು ಕೇಳುತ್ತದೆ. "ಸಂದರ್ಶಕರ ಹೆಸರುಗಳನ್ನು ನಾವು ಹೇಗೆ ಪಡಕೊಳ್ಳುವೆವು ಮತ್ತು ಸಂದರ್ಶನದ ಕಾರ್ಯಗಳನ್ನು ಹೇಗೆ ಮಾಡುವೆವು?"; "ಯಾರು ಸಂದರ್ಶನ ಮಾಡುವರು?"; ಮತ್ತು "ಅದು ಯಾವಾಗ ಮಾಡಲ್ಪಡುತ್ತದೆ?"

## ಸ್ಥಳಿಕ ಸಭೆಯ ನಿರ್ದಿಷ್ಟ ಅಗತ್ಯತೆಗಳನ್ನು ಪೂರೈಸುವುದು

ಯೋಜಿಸುವುದು ಸಾಧ್ಯತೆಗಳನ್ನು, ನಿರೀಕ್ಷಣೆಗಳನ್ನು, ಸಮಸ್ಯೆಗಳನ್ನು ಮತ್ತು *ಪ್ರತ್ಯೇಕ ವಾದ ಸಭೆಯ ಅದ್ವಿತೀಯ ಅವಕಾಶಗಳನ್ನು ಒಳಗೊಂಡಿರುತ್ತದೆ.* ಬಹಳ ಸಲ, ಸಭೆಯ ನಾಯಕರು ಇತರ ಸಭೆಗಳಲ್ಲಿ ಪರಿಣಾಮಕಾರಿಯಾಗಿ ಸಿದ್ಧಪಡಿಸಲ್ಪಟ್ಟ ಕಾರ್ಯಕ್ರಮ ಗಳನ್ನು ತಮ್ಮ ಸಭೆಯ ಪರಿಸ್ಥಿತಿಗೆ ಯೋಗ್ಯವಾಗಿರುವವೋ ಇಲ್ಲವೋ ಎಂಬುದನ್ನು ಯೋಚಿಸದೇ ಅನುಕರಿಸಿಬಿಡುತ್ತಾರೆ. ಉದಾಹರಣೆಯಾಗಿ, ಅಮೇರಿಕಾದ ಹೊರಗಿನ ಸಭಾನಾಯಕರು, ಯು.ಎಸ್.ದಲ್ಲಿ ಉಪಯೋಗಿಸಿದ, ಅನೇಕ ಕಾರ್ಯಕ್ರಮಗಳು ಇತರ ದೇಶಗಳಿಗೆ ಮಾರ್ಪಾಟಗಳಿಲ್ಲದೇ, ಯೋಗ್ಯವಾದವುಗಳಾಗಿರುವದಿಲ್ಲ ಎಂಬುದನ್ನು ಅರಿತು ಕೊಳ್ಳತಕ್ಕದ್ದು.

## ಪರಿಣಾಮಗಳನ್ನು ಮುನ್ನೋಡುವುದು

ಸಾಧ್ಯವಾದ ಮಟ್ಟಿಗೆ ನಾಯಕರು ತಮ್ಮ ಯೋಜಿಸುವಿಕೆಯ ಪರಿಣಾಮಗಳನ್ನು ಮುನ್ನೋಡಬೇಕು. ಅನೇಕ ಯೋಜನೆಗಳು ಬಿದ್ದುಹೋಗುತ್ತವೆ, ಅವರು ಮಾಡಬೇಕೆಂದು ಉದ್ದೇಶಿಸಿದ್ದರಲ್ಲಿ ಸೋತು ಹೋದದ್ದರಿಂದ ಅಲ್ಲ, ಆದರೆ ಅಪೇಕ್ಷಿತ ಪರಿಣಾಮಗಳಿಗೆ ಅವು ಪ್ರತಿಯಾದ ಉತ್ಪಾದನೆಯ ಪರಿಣಾಮಗಳನ್ನು ಉತ್ಪಾದಿಸುವ ಕಾರಣದಿಂದಾಗಿರುತ್ತದೆ. ಸ್ಥಳಿಕ ಸಭೆಯ ನಾಯಕರು ತಾವು ಮಾಡುವ ಯಾವುದೇ ಯೋಜನೆಗಳ ಪರಿಣಾಮಗಳನ್ನು ಮುನ್ನೋಡಲು ಪ್ರಯತ್ನಿಸಿದರೆ, ಅವರು ಪರಿಣಾಮವಾಗುವ ಒಳ್ಳೆಯದನ್ನು ಹೆಚ್ಚಿಸಲು ಅವರು ಪ್ರಯತ್ನಿಸುವರು ಮತ್ತು ಯಾವುದೇ ಕೆಡುಕಿನ ಪರಿಣಾಮಗಳನ್ನು ತೆಗೆದು ಹಾಕುವರು.

## ಸಂಘಟಿಸುವುದು

ಯೋಜನೆಗಳು ಮಾಡಲ್ಪಟ್ಟ ನಂತರ, ಸಭಾ ನಾಯಕರು ಯೋಜನೆಗಳನ್ನು ಕೈಕೊಳ್ಳ ಲಿಕ್ಕೆ ಅಗತ್ಯವಾಗಿರುವ ಸಂಘಟನೆಯನ್ನು ಒದಗಿಸುವ ಅಗತ್ಯತೆಯಿದೆ.

### "ಅದನ್ನು ಸರಳವಾಗಿ ಇಡುವ" ನಿಯಮ

ನಾಯಕರು ಕೆಲಸವನ್ನು ಸಂಘಟಿಸುವಂತೆ, ಅವರು "ಅದನ್ನು ಸರಳವಾಗಿ ಇಡುವ" ನಿಯಮವನ್ನು ಜ್ಞಾಪಿಸಿಕೊಳ್ಳಬೇಕು: ಸಭೆಯಲ್ಲಿ, ಕಡಿಮೆ ಸಂಘಟನೆಯಿರುವುದು ಹೆಚ್ಚು ಉತ್ತಮವಾಗಿರುತ್ತದೆ. ಅದು ಈಗಾಗಲೇ ತೃಪ್ತಿಕರವಾಗಿ ಮಾಡಲ್ಪಟ್ಟಿದ್ದರೆ, ಅದನ್ನು ಅಷ್ಟಕ್ಕೆ ಬಿಟ್ಟು ಬಿಡಿರಿ. ಅಪೊಸ್ತಲರ ಕೃತ್ಯಗಳು 6ರಿಂದ ಏನಾದರೂ ಮಾಡಲ್ಪಡದೇ ಇರುವಾಗ ಇಲ್ಲವೇ ತೃಪ್ತಿಕರವಾಗಿ ಮಾಡಲ್ಪಡದಿದ್ದಾಗ, ಕೆಲಸವು ಸಂಘಟಿಸಲ್ಪಡ ಬೇಕಾಗುತ್ತದೆ ಎಂದು ತೀರ್ಮಾನಿಸಬಹುದು.

### "ಅದನ್ನು ಸರಿಯಾಗಿ ಮಾಡುವ" ನಿಯಮ

ಒಂದು ಸಂಘಟಿತ ಕಾರ್ಯಕ್ರಮವು ಸ್ಥಳಿಕ ಸಭೆಯ ಗುರಿಗಳನ್ನು ಪೂರೈಸಬೇಕಾದ ಅವಶ್ಯಕತೆಯಿದ್ದರೆ - ಉದಾಹರಣೆಯಾಗಿ, ಸಂದರ್ಶನದ ಒಂದು ಕಾರ್ಯಕ್ರಮ, ಆಗ ಇನ್ನೊಂದು ನಿಯಮವು ಪರಿಣಾಮವಾಗಲು ಬರುವುದು: "ಅದನ್ನು ಮಾಡುವುದು ಯೋಗ್ಯ ವಾದದ್ದಾಗಿದ್ದರೆ, ಅದನ್ನು ಸರಿಯಾಗಿ ಮಾಡುವುದು ಯೋಗ್ಯವಾದದ್ದಾಗಿದೆ."

*ನಾಯಕರು ಮುಂಚಿತವಾಗಿಯೇ ಯೋಜಿಸುವರಲ್ಲಿ ಮತ್ತು ಸಿದ್ಧತೆ ಮಾಡುವದರಲ್ಲಿ ತೊಡಗಬೇಕು.* ಕಾರ್ಯಕ್ರಮವನ್ನು ವಿಚಾರಿಸುವದರಲ್ಲಿ ಮತ್ತು ಅದನ್ನು ಕಾರ್ಯರೂಪಕ್ಕೆ ತರುವದರ ಮಧ್ಯದಲ್ಲಿ - ಜಾಗರೂಕ ಯೋಜನೆಯ ಮತ್ತು ಸಿದ್ಧತೆಯ ಮಧ್ಯದಲ್ಲಿ ಬಹ ಳಷ್ಟು ಸಮಯವು ಕೊಡಲ್ಪಡತಕ್ಕದ್ದು. ಕಾರ್ಯ ಪ್ರಾರಂಭಿಸುವದಕ್ಕಾಗಿ ಕಾರ್ಯಕ್ರಮವು ರೂಪಿಸಲ್ಪಡಬೇಕು. ಅದಕ್ಕಾಗಿ ಸಮಯ ನಿಶ್ಚಿತಪಡಿಸಲ್ಪಡಬೇಕು, ಸಿದ್ಧತೆಯು ಯಾವಾಗ ಮುಗಿಯಬೇಕು ಎಂಬುದನ್ನು ನಿರ್ಣಯಿಸಬೇಕು. ಉದಾಹರಣೆಯಾಗಿ, ಒಂದು ಸಭೆಗೆ ಒಂದು ಸುವಾರ್ತಾ ಕೂಟವಿರಬೇಕೆಂದಾಗ, ಕಾರ್ಯಕ್ರಮವು ಮಾಡಲ್ಪಡಬೇಕು. ಭಾಷಣಕಾರರನ್ನು ನಿರ್ಧರಿಸಿಕೊಳ್ಳಬೇಕು. ಕೂಟದ ದಿನಾಂಕಗಳು ನಿರ್ಣಯಿಸಲ್ಪಡಬೇಕು ಇದು ಒಂದು ವರ್ಷ ಮುಂಚಿತವಾಗಿ ಮಾಡಲ್ಪಡತಕ್ಕದ್ದು. ಪ್ರಚಾರ ಕಾರ್ಯವು ಮೂರು ತಿಂಗಳ ಮೊದಲು ಪ್ರಾರಂಭವಾಗಬೇಕು. ವಿಶೇಷ ಪ್ರಾರ್ಥನೆಗಳಿಗಾಗಿ, ಸಂದರ್ಶನಕ್ಕಾಗಿ ಮತ್ತು ಪ್ರಚಾರಕ್ಕಾಗಿ ಒಂದು ತಿಂಗಳ ಮೊದಲು ಪ್ರಾರಂಭಿಸಬೇಕು. ಕಾರ್ಯಕ್ರಮ ವಿವರಣೆಯಲ್ಲಿ ಪ್ರತಿಯೊಂದು ಕಾರ್ಯಕ್ಕಾಗಿ ಜವಾಬ್ದಾರರಾಗಿರುವವರ ಹೆಸರುಗಳನ್ನು ಯಾದಿ ಮಾಡಬೇಕು.

*ಯಾವುದೇ ಕಾರ್ಯಕ್ರಮವು, ಅದು ಯಶಸ್ವಿಯಾಗ ಬೇಕಾದರೆ, ಅದರ ಪ್ರಚಾರವಾ ಗಬೇಕು, ಬಹಿರಂಗ ಪಡಿಸಲ್ಪಡಬೇಕು ಹಾಗೂ ಜಾಹೀರಾತು ಆಗಿರಬೇಕು.* ಪ್ರಚಾರ ಕಾರ್ಯವು ಸದಸ್ಯರು ಒಳಗೊಳ್ಳುವಂತೆ ಮಾಡುವ ಪ್ರಯತ್ನಕ್ಕೆ ಸಂಬಂಧಿಸಿರುತ್ತದೆ. ಸಂಘಟಿತ ಕಾರ್ಯಕ್ರಮಗಳು ಬಹಿರಂಗ ಪ್ರಕಟಣೆಗಳ, ವಿಶೇಷ ಪ್ರಸಂಗಗಳ, ಮತ್ತು ಪಾಠಗಳ, ಸಭಾ ಪತ್ರಗಳಿಂದ, ಸೂಚನಾ ಫಲಕಗಳಿಂದ, ಪತ್ರಗಳ ಇತ್ಯಾದಿಗಳ ಮೂಲಕ ಪ್ರಚಾರಪಡಿಸುವಿಕೆಯು ಅಗತ್ಯವಾದದ್ದಾಗಿದೆ.

ಒಂದು ಕಾರ್ಯ ಕ್ರಮಕ್ಕೆ ಬಹಿರಂಗ ಪಡಿಸುವಿಕೆಯು ಸ್ಥಳಿಕ ಮಾಧ್ಯಮದ ಮುಖಾಂತರ - ವೃತ್ತ ಪತ್ರಿಕೆಗಳು, ರೇಡಿಯೋ, ಟೆಲಿವಿಶನ್ ಇತ್ಯಾದಿ - ವ್ಯವಸ್ಥೆಗೊಳಿಸಬಹುದು. ಬಹಳ ಸಲ, ಸುದ್ದಿ ಮಾಧ್ಯಮವು ಮುಂದಿನ ದಿನಗಳ ಘಟನೆಗಳನ್ನು ಸಮಾಜಗಳಲ್ಲಿ ಸಭೆಯಲ್ಲಿ ಮತ್ತು ಜನರನ್ನು ಒಳಗೊಂಡಿರುವ ಸಂಗತಿಗಳು ಪ್ರಕಟಿಸಲು ಆಸಕ್ತಿಯುಳ್ಳವುಗಳಾಗಿ ರುವವು. ಸಮಯ ಮತ್ತು ವರಗಳಿದ್ದವರು ಸುದ್ದಿ ಕಥೆಗಳನ್ನು ಸಿದ್ಧಪಡಿಸಿ ಅವುಗಳನ್ನು

ಕೊಡಬಹುದು.

ಜಾಹಿರಾತು ಕೊಡುವುದು ಬಹಿರಂಗವಾಗಿ ಜನರು ಸಭೆಯ ಕಾರ್ಯಕ್ರಮಗಳನ್ನು ತಿಳಿಯುವಂತೆ ಮಾಡುವುದು ಹಾಗೂ ಅವರು ಅದರ ಲಾಭ ಪಡೆಯುವಂತೆ ಪ್ರೋತ್ಸಾಹಿಸುವುದು ಹಣ ಖರ್ಚು ಮಾಡುವದಕ್ಕೆ ಸಂಬಂಧಿಸಿರುತ್ತದೆ. ದೀರ್ಘಕಾಲದ ಸಮಯದಲ್ಲಿ, "ಪರಿಣಾಮಕಾರಿಯಾದ ಜಾಹಿರಾತು ಕೊಡುವಿಕೆಗೆ ಹಣ ಖರ್ಚಾದಂತಲ್ಲ ಆದರೆ ಅದು ಹಿಂದಿರುಗಿ ಕೊಡುತ್ತದೆ" ಎಂದು ಸಭೆಯ ನಾಯಕರು ಅರ್ಥಮಾಡಿಕೊಳ್ಳತಕ್ಕದ್ದು.

*ಸಾಕಷ್ಟು ಸಂಘಟನೆಯನ್ನು ಒದಗಿಸುವ ಜವಾಬ್ದಾರಿಕೆಯು ನಾಯಕರಿಗೆ ಇರುವುದು.* ಅವರು ಮೊದಲು ಎಷ್ಟು ಸಂಘಟನೆಯ ಅಗತ್ಯತೆಯಿದೆ ಎಂಬುದನ್ನು ನಿರ್ಧರಿಸತಕ್ಕದ್ದು. ಯಾರು ಮೇಲ್ವಿಚಾರಣೆ ಮಾಡುವರು ಎಂಬುದನ್ನು ನಿರ್ಧರಿಸುವದಕ್ಕಿಂತ ಹೆಚ್ಚಾದದ್ದನ್ನು ಸಭಾ ಹಿರಿಯರು ಮಾಡಬೇಕಾಗಿರುವದಿಲ್ಲ. ಕಾರ್ಯಕ್ರಮವು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆಂಬುದನ್ನು ನೋಡಲಿಕ್ಕೆ ಅಗತ್ಯವಾದ ಅದನ್ನು ದಾಟಿದ ಸಂಘಟನೆಯು ಅಗತ್ಯವಾಗಿರುತ್ತದೆ. ಕಾರ್ಯಕ್ರಮದ ಮೇಲ್ವಿಚಾರಣೆಯಲ್ಲಿ ಇರುವ ವ್ಯಕ್ತಿಯು ಇತರ ವಿಷಯಗಳ ಮಧ್ಯದಲ್ಲಿ, ಈ ಕೆಳಗಿನದನ್ನು ಮಾಡುವ ಅಗತ್ಯತೆಯಿದೆ. ಕಾರ್ಯಕ್ರಮವು ಮಾಡಬೇಕಾದದ್ದನ್ನು ಮಾಡುವಲ್ಲಿ ಹೆಚ್ಚು ಯೋಗ್ಯವಾದ ಮತ್ತು ಪರಿಣಾಮಕಾರಿಯಾದ ವಿಧಾನವನ್ನು (ಗಳನ್ನು) ರೂಪಿಸತಕ್ಕದ್ದು. ಕಾರ್ಯಕ್ರಮದೊಂದಿಗೆ ಸಹಾಯ ಮಾಡಲು ಜನರನ್ನು ಆಯ್ದುಕೊಂಡು, ತರಬೇತು ಕೊಡಿರಿ. ಸ್ಟಾಫ್‌ಮೀಟಿಂಗ್‌ಗಾಗಿ ಸಮಯಗಳನ್ನು ನಿರ್ಧರಿಸಿರಿ. ಅದರ ಮುಕ್ತಾಯದಲ್ಲಿ ಮೌಲ್ಯಮಾಪನ ಮಾಡುವ ಸಾಧನಗಳನ್ನು ನಿರ್ಧರಿಸಿರಿ. ಕಾರ್ಯಕ್ರಮವು ಪ್ರಾರಂಭವಾಗುವ ಮೊದಲೇ ಹಾಗೆ ಮಾಡಿರಿ.

*ಎಲ್ಲಾ ಕ್ರೈಸ್ತರು ಅತ್ಯುತ್ತಮ ಪರಿಣಾಮಕ್ಕಾಗಿ ಹೋರಾಟ ಮಾಡಲು ಪ್ರೋತ್ಸಾಹಿಸಲ್ಪಡಬೇಕು.* ಕೆಲಸದ ನಾಯಕರು ಅದು ಅತ್ಯುತ್ತಮವಾದ ಲಕ್ಷಣಗಳನ್ನು ಹೊಂದಿರುವದರ ಬಗ್ಗೆ ನಿಶ್ಚಿತತೆ ಪಡಿಸಿಕೊಳ್ಳಬೇಕು. ಸ್ಥಳಿಕ ಸಭೆಯು ಒಂದು ಸುವಾರ್ತಾ ಕೂಟವನ್ನು ಯೋಜಿಸುತ್ತಿದ್ದರೆ, ಕಟ್ಟಡವನ್ನು ಸಾಧ್ಯವಾದಷ್ಟು ಅತ್ಯುತ್ತಮ ಸ್ಥಿತಿಯಲ್ಲಿರುವಂತೆ ಮಾಡಬೇಕು, ಅತ್ಯುತ್ತಮವಾದ ಪ್ರಸಂಗಿಸುವಿಕೆ ಮತ್ತು ಹಾಡುವಿಕೆ ಇರುವಂತೆ ನೋಡಿಕೊಳ್ಳಬೇಕು, ತಮಗೆ ಸಾಧ್ಯವಾದಷ್ಟು ಖರ್ಚುಮಾಡುವದರಿಂದ ಅತ್ಯುತ್ತಮ ಜಾಹೀರಾತನ್ನು ಕೊಂಡುಕೊಳ್ಳಬೇಕು. ಶ್ರೇಷ್ಠತೆಯನ್ನು ಎಲ್ಲರೂ ಮೆಚ್ಚಿಕೊಳ್ಳುತ್ತಾರೆ. ಹೆಚ್ಚು ಮಹತ್ವವುಳ್ಳದ್ದು ತನಗಾಗಿ ತನ್ನ ಜನರು ಯಜ್ಞವರ್ಪಿಸುವಾಗ ದೇವರು "ಅತ್ಯುತ್ತಮವಾದದ್ದನ್ನು" ಯಾವಾಗಲೂ ಅಪೇಕ್ಷಿಸಿದ್ದಾನೆ. ಇಂದು ಸಭೆಗಾಗಿ ನಮ್ಮ ಕೆಲಸವು ನಾವು ಮಾಡಬಹುದಾದ "ಅತ್ಯುತ್ತಮವಾದದ್ದು" ಆಗಿರಬಾರದೋ?

*ಸಂಘಟಿಕರು ಅಂತ್ಯವನ್ನು ಮುನ್ನೋಡುವರು.* ಒಂದು ಕಾರ್ಯಕ್ರಮದ ಮೇಲ್ವಿ ಚಾರಕರಾಗಿರುವವರು ಕಾರ್ಯಕ್ರಮಗಳು ಬಲಹೀನವಾಗಿ ಸತ್ತು ಹೋಗ ಬಹುದೆಂಬುದರ ಬಗ್ಗೆ ಅರುಹುವುಳ್ಳವರಾಗಿರಬೇಕು. ಒಂದು ಸಭೆಯು ಬೇಕೆಂತಲೇ ಪ್ರಯತ್ನವನ್ನು ತಡೆಹಿಡಿದಾಗ, ಪರಿಣಾಮವು ಸೋಲನ್ನು, ನಿರಾಶೆಯನ್ನು ಅನುಭವಿಸುವುದಾಗಿದೆ.

ಹೆಚ್ಚು ಉತ್ತಮವಾದ ಮಾರ್ಗವಿರುವದೋ? ನಾಯಕರಿಗೆ ಸಹಾಯ ಮಾಡಬಹುದಾದ ಎರಡು ಸಲಹೆಗಳು ಇಲ್ಲಿರುತ್ತವೆ: (1) ಕಾರ್ಯಕ್ರಮವು ಸದಾಕಾಲ ಮುಂದುವರಿಯುವಂಥದ್ದನ್ನಾಗಿ ಮಾಡದೇ ತಾತ್ಕಾಲಿಕವಾದದ್ದನ್ನು ಮಾಡುವದಕ್ಕಾಗಿ ಅದರ ಅಂತ್ಯವನ್ನು ಯೋಜಿಸಿರಿ. (2) ಯಾವುದೇ ಕಾರ್ಯಕ್ರಮವು ಪರಿಶುದ್ಧವಾದದ್ದಾಗಿರುವದಿಲ್ಲ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಿರಿ. ಮನುಷ್ಯನ "ಕಾರ್ಯಕ್ರಮಗಳು" ದೇವರ ವಾಕ್ಯದೊಂದಿಗೆ ಸರಿ ಹೋಲಿಸಲ್ಪಡಬಾರದು. ಒಂದು ಆಲೋಚನೆ ಕಾರ್ಯ ಮಾಡದಿದ್ದರೆ, ಸಭೆಯು ಯಾವುದೇ ಸೋಲಿನ ಇಲ್ಲವೇ ನಿರಾಶೆಯ ಯಾವುದೇ ಭಾವನೆಯಿಲ್ಲದೆ ಅದನ್ನು ಕೈ ಬಿಟ್ಟು ಇನ್ನೊಂದನ್ನು ಪ್ರಯತ್ನಿಸಬೇಕು. ಸಾಮಾನ್ಯವಾಗಿ ಸ್ಥಳಿಕ ಸಭೆಗಳು ತಮ್ಮ ಕಾರ್ಯಕ್ರಮ

ಗಳು ಬದಲಾಗುವದನ್ನು ಕೈ ಬಿಡಲ್ಪಡುವದನ್ನು, ಕೂಡಿಸಲ್ಪಡುವದನ್ನು ಇಲ್ಲವೇ ತಿದ್ದು ಪಡಿಮಾಡಲ್ಪಡುವದನ್ನು - ಕಾಲಕಾಲಕ್ಕೆ ನಿರೀಕ್ಷಿಸಬೇಕು.

## ನಿರ್ವಹಿಸುವುದು

ಕರ್ತನ ಸಭೆಯಲ್ಲಿ ಒಂದು ಸಲ ಕಾರ್ಯವು ಯೋಜಿಸಲ್ಪಟ್ಟರೆ ಮತ್ತು ಸಂಘಟಿ ಸಲ್ಪಟ್ಟರೆ, ಯಾರಾದರೂ ಅದು ಮಾಡಲ್ಪಡುವಂತೆ ನಿಶ್ಚಿತ ಪಡಿಸಬೇಕು: ಇದು "ನಿರ್ವಹಿಸುವ" ಕಾರ್ಯಕ್ರಮ ಎಂದು ಕರೆಯಲ್ಪಡುತ್ತದೆ.

ಹಿರಿಯರಿಗೆ ಅತ್ಯುತ್ತಮ ವಿಚಾರವು ಕಾರ್ಯಕ್ರಮಗಳ ನಿಜವಾದ ನಿರ್ವಹಿಸುವಿಕೆಯನ್ನು ಇತರರಿಗೆ ಒಪ್ಪಿಸುವುದಾಗಿದೆ, ಇದರಿಂದ ಹಿರಿಯರು ಹೆಚ್ಚು ಮಹತ್ವದ ಸಂಗತಿಗಳ ಮೇಲೆ - ಪ್ರಾರ್ಥನೆ, ವಾಕ್ಯದ ಸೇವೆ ಮತ್ತು ಪ್ರಾಣಗಳ ಜೋಪಾನತೆಯ ಮೇಲೆ ಕೇಂದ್ರೀಕರಿಸಬಹುದು. ಹೀಗಿದ್ದರೂ, ಹಿರಿಯರಿಗೆ ಕೆಲವು ಸಲ ವಿಶೇಷ ವರಗಳು, ಆಸಕ್ತಿಗಳು, ಪ್ರತ್ಯೇಕವಾದ ಕ್ಷೇತ್ರಗಳಲ್ಲಿ ತರಬೇತಿ - ಬೈಬಲ್ ಸ್ಕೂಲಿನ ಬಗ್ಗೆ, ಇಲ್ಲವೇ ಮಿಶನ್ನುಗಳ ಬಗ್ಗೆ ಇಲ್ಲವೇ ಪ್ರಸಂಗಿಸುವದರ ಮತ್ತು ಬೋಧಿಸುವದರ ಮೇಲೆ (1 ತಿಮೊಥೆ 5:17), ತರಬೇತಿ ಇರಬಹುದು ಕಟ್ಟಡಗಳ ಕಟ್ಟುವಿಕೆಯ ಬಗೆಗೂ ಸಂಬಂಧಿಸಿ ಸಾಮರ್ಥ್ಯಗಳು ಇರಬಹುದು - ನಿರ್ದಿಷ್ಟವಾದ ಕಾರ್ಯಕ್ರಮಗಳ ಮೇಲ್ವಿಚಾರಣೆಯಲ್ಲಿರಲು ಅವರಿಗೆ ಸ್ವಾಭಾವಿಕವಾದ ಆಯ್ಕೆಯನ್ನು ಅದು ಕೊಡುವುದು. ಈ ಉದಾಹರಣೆಗಳಲ್ಲಿ, ಒಬ್ಬ ಹಿರಿಯನು ಒಂದು ಪ್ರತ್ಯೇಕವಾದ ಕೆಲಸವನ್ನು ನಿರ್ದೇಶಿಸಬಹುದು. ಅವನು ಒಬ್ಬ ಹಿರಿಯನಾಗಿರುವದರಿಂದ ಅಲ್ಲ, ಆದರೆ ಅವನಿಗೆ ದೇವರು ಕೊಟ್ಟ ಸಾಮರ್ಥ್ಯಗಳ ಕಾರಣದಿಂದ ಹಾಗೆ ಮಾಡಬಹುದು.

### ಒಪ್ಪಿಸಿಕೊಡುವದರ ಮೌಲ್ಯ

ಸಾಮಾನ್ಯವಾಗಿ, ಸಭೆಯನ್ನು ನಡಿಸುವವರು ಭಿನ್ನವಾದ ಕಾರ್ಯಕ್ರಮಗಳಿಗಾಗಿ ಸದಸ್ಯರಿಗೆ ಜವಾಬ್ದಾರಿಕೆಯನ್ನು ವಹಿಸಿಕೊಡಬೇಕು. ವಹಿಸಿಕೊಡುವಿಕೆಯು ನಾಯಕರನ್ನು ಮಿತಿಮೀರಿದ ವಿವರಗಳಿಂದ ದೂರವಿಡುವುದು; ಅವರಿಗೆ ಮಾಡಲಿಕ್ಕೆ ದೇವರು ಕೊಟ್ಟ ನಿರ್ದಿಷ್ಟ ಕೆಲಸಗಳ ಮೇಲೆ ಅವರು ಕೇಂದ್ರೀಕರಿಸಬಹುದು. ಇತ್ರೋವನು ತನ್ನ ಅಳಿಯ ಮೋಶೆ ಯು ಪ್ರಾತಃಕ್ಕಾಲದಿಂದ ಸಾಯಂಕಾಲದವರೆಗೆ ಜನರ ನ್ಯಾಯತೀರಿಸುವದನ್ನು ನೋಡಿ ದಾಗ, ಹೀಗೆ ಹೇಳಿದನು, "ನೀನು ಮಾಡುವ ಕಾರ್ಯಕ್ರಮವು ಒಳ್ಳೇದಲ್ಲ. ಈ ಕೆಲಸ ಬಹಳ ಕಷ್ಟವಾದದ್ದು; ನೀನೊಬ್ಬನೇ ಅದನ್ನು ನಡಿಸಲಾರಿ; ನೀನೂ ನಿನ್ನ ಸಂಗಡ ಇರುವ ಜನರೂ ನಿಶ್ಚಯವಾಗಿ ಬಳಲಿ ಹೋಗುವಿರಿ" (ವಿಮೋಚನಕಾಂಡ 18:17, 18). ಆಗ ಅವನು ಮೋಶೆಗೆ ಸಹಾಯ ಮಾಡಲು, ಇತರರನ್ನು ನೇಮಿಸಬೇಕೆಂದು ಸಲಹೆ ಮಾಡಿದನು. ಇದು ಪರಿಣಾಮದಲ್ಲಿ ನ್ಯಾಯ ತೀರಿಸುವ ಕಾರ್ಯದ ಭಾಗವನ್ನು ಇತರರಿಗೆ ಒಪ್ಪಿಸಿಕೊಡಬೇ ಕಾಗಿತ್ತು. (ಅಪೊಸ್ತಲರ ಕೃತ್ಯಗಳು 6:3, 4ನ್ನೂ ಸಹ ನೋಡಿರಿ.) ಒಪ್ಪಿಸಿ ಕೊಂಡುವಿಕೆಯು ನಾಯಕರನ್ನು ಒಳಗೊಂಡು ಸದಸ್ಯರು ತಮಗೆ ಅತೀ ಹೆಚ್ಚು ಯೋಗ್ಯವಾದ ಸೇವೆಗಳಲ್ಲಿ ತಮ್ಮ ಸ್ವಂತ ತಲಾಂತುಗಳನ್ನು ಉಪಯೋಗಿಸುವಂತೆ ಬಿಡುವುದು. ಅದು ಚೆನ್ನಾಗಿ ಮಾಡಲ್ಪಡು ವಾಗ, ವಹಿಸಿ ಕೊಡುವಿಕೆಯು ಹೆಚ್ಚು ಕೆಲಸವನ್ನು ಮಾಡಲಿಕ್ಕಾಗುವಂತೆ ಮತ್ತು ಹೆಚ್ಚು ತೃಪ್ತಿಕರವಾಗಿ ಮಾಡಲಿಕ್ಕಾಗುವಂತೆ ನಡಿಸುವುದು. ಸಮಸ್ಯೆಗಳು ವಹಿಸಿಕೊಡಲ್ಪಡುವದರ ಮುಖಾಂತರ ಪರಿಹರಿಸಲ್ಪಡುವವು.

### ವಹಿಸಿಕೊಡುವದರ "ನಿಯಮಗಳು"

ವಹಿಸಿಕೊಡುವದರ ಮೌಲ್ಯವನ್ನು ನಿಶ್ಚಯ ಪಡಿಸುವದಕ್ಕಾಗಿ, ಸಭೆಯ ನಾಯಕರು ಈ ಮಾರ್ಗದರ್ಶನಗಳನ್ನು ಅನುಸರಿಸತಕ್ಕದ್ದು.

*ಸರಿಯಾದ ಕೆಲಸಗಳೊಂದಿಗೆ, ಸರಿಯಾದ ಜನರನ್ನು ಹೊಂದಿಸುವದನ್ನು ಹುಡುಕಿ ಬುದ್ಧಿವಂತಿಕೆಯಿಂದ ವಹಿಸಿಕೊಡಿರಿ.* ವರವುಳ್ಳ ಜನರು - ಪ್ರತ್ಯೇಕವಾದ ಕೆಲಸದ ಮೇಲ್ವಿಚಾರಕರಾಗಿರಲು ಪ್ರತ್ಯೇಕವಾದ ಸಾಮರ್ಥ್ಯವುಳ್ಳ ಜನರನ್ನು ಆಯ್ಕೆ ಮಾಡತಕ್ಕದ್ದು. ಇದಕ್ಕೆ ಕೂಡಿಸಿ ಮತ್ತು ಹೆಚ್ಚು ಪ್ರಾಮುಖ್ಯವಾಗಿ, ತಮಗೆ ಕೊಡಲ್ಪಟ್ಟ ಕೆಲಸಗಳನ್ನು ನಂಬಿಕೆಯಿಂದ ಮಾಡುವ ಅವಲಂಭನೆಗೆ *ಯೋಗ್ಯರಾದ ಜನರನ್ನು* ಆಯ್ಕೆ ಮಾಡಿಕೊಳ್ಳಿರಿ; *ಪ್ರಾಮಾಣಿಕ ಜನರನ್ನು ಯಥಾರ್ಥರಾದ ಜನರನ್ನು, ಕಠಿಣವಾಗಿ ಕೆಲಸ ಮಾಡುವ ಜನರನ್ನು,* ಎಲ್ಲಕ್ಕಿಂತ ಹೆಚ್ಚಾಗಿ ಆತ್ಮಿಕ ಜನರನ್ನು ಆಯ್ದು ಕೊಳ್ಳಿರಿ. ಸಭೆಯಲ್ಲಿ ನಾಯಕತ್ವದ ಯಾವುದೇ ಸ್ಥಾನವು ಅದು ಕ್ರಿಸ್ತನಿಗೆ ತಮ್ಮನ್ನು ಸಮರ್ಪಿಸಿಕೊಳ್ಳದವರಿಗೆ ಒಪ್ಪಿಸಲ್ಪಡುವಷ್ಟು ಪ್ರಾಪಂಚಿಕವಾದದ್ದಾಗಿರುವದಿಲ್ಲ.

*ಒಂದು ಕೆಲಸವನ್ನು ಪೂರ್ತಿಗೊಳಿಸಲು ಅಗತ್ಯವಾಗಿದ್ದ ತರಬೇತಿಯನ್ನು ಒದಗಿಸುವುದು.* ಸರಿಯಾದ ಜನರನ್ನು ಆಯ್ಕೆ ಮಾಡುವದರ ಭಾಗವು ಈಗಾಗಲೇ ತರಬೇತು ಹೊಂದಿದವರನ್ನು ನೇಮಿಸುವುದು ಇಲ್ಲವೇ ಆ ಪ್ರತ್ಯೇಕವಾದ ಕ್ಷೇತ್ರದಲ್ಲಿ, ವರವುಳ್ಳವರನ್ನು ಇಲ್ಲವೇ ಆ ಕೆಲಸವನ್ನು ಚೆನ್ನಾಗಿ ಮಾಡಲು ಅರ್ಹತೆಯುಳ್ಳವರನ್ನು ನೇಮಿಸುವುದು ಆಗಿರುತ್ತದೆ. ಅವರಿಗೆ ಈಗಾಗಲೇ ಯಾವುದಾದರೂ ತರಬೇತಿ ಯಾಗಿದ್ದರೂ, ಹೆಚ್ಚಾದದ್ದನ್ನು ಪಡೆಯಲಿಕ್ಕೆ ಅವರಿಗೆ ಸಹಾಯ ಮಾಡಿರಿ ಮತ್ತು ಪ್ರೋತ್ಸಾಹಿಸಿರಿ. ಉದಾಹರಣೆಯಾಗಿ ಯುವ ಜನ ನಾಯಕರಿಗಾಗಿ, ಬೈಬಲ್ ಸ್ಕೂಲ್ ಟೀಚರಿಗಾಗಿ ಮತ್ತು ಇತರ ಕ್ರೈಸ್ತರಿಗಾಗಿ ಬುದ್ಧಿವಾದ ಹೇಳಲು ವರವುಳ್ಳವರಿಗೆ ಹೆಚ್ಚಿನ ತರಬೇತಿ ಹೊಂದಲು ಹಣ ಸಹಾಯ ಮಾಡಲು ಸಭೆಯಿಂದ ವ್ಯವಸ್ಥೆ ಮಾಡಿರಿ.

ಸಭಾ ನಾಯಕರ ಗುರಿಯು ಸಭೆಯ ಕೆಲಸವನ್ನು ಮಾಡುವದಕ್ಕೆ ಇತರರನ್ನು ತರಬೇತಿಗೊಳಿಸುವದರಿಂದ ಪ್ರಯೋಜನವುಳ್ಳವರಾಗುವುದಾಗಿದೆ. ತಿಮೊಥೆಯನಿಗೆ ಪೌಲನ ನಿರ್ದೇಶನವು ಎಲ್ಲಾ ರೀತಿಯ ಕೆಲಸದವರಿಗೆ ಅನ್ವಯಿಸಲ್ಪಡಬಹುದು: "ನೀನು ನನ್ನಿಂದ ಕೇಳಿದ ಉಪದೇಶವನ್ನು ಇತರರಿಗೆ ಬೋಧಿಸಲು ಶಕ್ತರಾದ ನಂಬಿಗಸ್ತ ಮನುಷ್ಯರಿಗೆ ಒಪ್ಪಿಸಿಕೊಡು" (2 ತಿಮೊಥೆ 2:2; RSV). "ಸಮಾಲೋಚಿಸುವದರ ಬಗ್ಗೆ ... ಇಲ್ಲವೇ ಬೈಬಲ್ ಸ್ಕೂಲನ್ನು ನಿರ್ದೇಶಿಸುವದರ ಬಗ್ಗೆ ... ಇಲ್ಲವೇ ಖಜಾಂಜಿಯಂತೆ ವರ್ತಿಸುವಂತೆ ನೀವು ಕಲಿತದ್ದನ್ನು ... ನಂಬಿಗಸ್ತ ಜನರಿಗೆ ಒಪ್ಪಿಸಿಕೊಡಿರಿ, ಅದರಿಂದ ಅವರು ಅದನ್ನು ಮಾಡಲು ಶಕ್ತರಾಗುವರು. ಮತ್ತು ಇತರರಿಗೆ ಅದನ್ನು ಮಾಡುವದಕ್ಕೆ ಬೋಧಿಸಲು ಶಕ್ತರಾಗುವರು" ಇದರಿಂದ ಸಭೆಯು ಮುಂದುವರಿಯುವುದು ಮತ್ತು ಪ್ರಗತಿ ಹೊಂದುವುದು.

*ಸ್ಪಷ್ಟವಾದ ಅಳತೆ ಗೋಲುಗಳನ್ನು, ಸಾಕಷ್ಟು ಹಣಕಾಸನ್ನು ಮತ್ತು ಯೋಗ್ಯವಾದ ಅಧಿಕಾರವನ್ನು ಒದಗಿಸಿರಿ.* ಇತರರಿಗೆ ವಶಪಡಿಸಿ ಕೊಡುವ ಕೆಲಸವನ್ನು ನಿರೂಪಿಸಿರಿ. ಆಮೇಲೆ ಕೆಲಸಕ್ಕೆ ಸಾಕಷ್ಟು ಹಣವನ್ನು ಒದಗಿಸಿರಿ ಹಾಗೂ ಪ್ರತಿಯೊಂದು ಕಾರ್ಯಕ್ರಮವನ್ನು ಕೈಕೊಳ್ಳಲು ನೇಮಿಸಲ್ಪಟ್ಟವರಿಗೆ ಸಾಕಷ್ಟು ಅಧಿಕಾರವನ್ನು ವಹಿಸಿಕೊಡಿರಿ. ತಿಳಿದು ಕೊಳ್ಳಲ್ಪಟ್ಟ ಮೇರೆಗಳೊಳಗೆ, ಕೆಲಸಕ್ಕಾಗಿ ಯಾರಿಗೆ ಜವಾಬ್ದಾರಿಕೆ ಹೊರಿಸಲ್ಪಟ್ಟಿದೆಯೋ ಅವರಿಗೆ ತೀರ್ಮಾನಗಳನ್ನು ಮಾಡಲು, ಸಲಕರಣೆಗಳನ್ನು ಕೊಂಡು ಕೊಳ್ಳಲು, ಮತ್ತು ಸಾಮಾನ್ಯವಾಗಿ ಅವನ ಅತ್ಯುತ್ತಮ ಸಾಮರ್ಥ್ಯಕ್ಕೆ ತಕ್ಕಂತೆ ಮಾಡಲು ಹಕ್ಕು ಇರತಕ್ಕದ್ದು. ಅಧಿಕಾರವಿಲ್ಲದೇ ಜವಾಬ್ದಾರಿಕೆಯನ್ನು ಒಪ್ಪಿಸಿಕೊಡುವುದು ಸೋಲು ಆಗಿರುತ್ತದೆ.

*ಮೇಲ್ವಿಚಾರಣೆಯನ್ನು ಒದಗಿಸಿರಿ.* ಹೆಚ್ಚಾದ ವಿಷಯಗಳಲ್ಲಿ ಬೇರೊಬ್ಬರು ಕೆಲಸದ ನಿಜವಾದ ಕಾರ್ಯಕ್ರಮಗಳ ಮೇಲ್ವಿಚಾರಣೆ ಮಾಡುತ್ತಿದ್ದರೂ, ಸ್ಥಳಿಕ ಸಭೆಯ ನಾಯಕರು - ಹಿರಿಯರು, ಹಿರಿಯರು ಇದ್ದರೆ - "ಮೇಲ್ವಿಚಾರಕರನ್ನು ಮೇಲ್ವಿಚಾರಿಸಲು" ಜವಾಬ್ದಾರರಾಗಿರುವರು. ವಹಿಸಿಕೊಡುವುದು ಅಂದರೆ ಒಂದು ಕಾರ್ಯ ಕ್ರಮವನ್ನು ಅದರ ಜವಾಬ್ದಾರಿಕೆ ವಹಿಸಲು ಯಾರಿಗಾದರೂ ಕೊಟ್ಟು ಅದರೊಂದಿಗೆ ಪುನಃ ಎಂದೆಂದಿಗೂ ಸಂಬಂಧವಿಲ್ಲದೇ

ಇರುವಂಥದ್ದಾಗಿರುವದಿಲ್ಲ. ಆದರೆ, ಜವಾಬ್ದಾರಿಕೆಯನ್ನು ವಹಿಸಿಕೊಡುವದರಲ್ಲಿ ಏನು ಸಂಭವಿಸುತ್ತಲಿದೆ ಎಂಬುದರ ಮಾಹಿತಿ ಪಡೆಯುತ್ತಲೇ ಇರ್ರಿ. ವಿವಿಧ ರೀತಿಗಳಲ್ಲಿ ಮೇಲ್ವಿಚಾರಕರಿಗೆ ಸಹಾಯ ಮಾಡಲು ಸಿದ್ಧರಾಗಿರ್ರಿ: ಉದಾಹರಣೆಯಾಗಿ ಪ್ರೋತ್ಸಾಹದಲ್ಲಿ, ನಿರ್ದೇಶನದಲ್ಲಿ ಮತ್ತು ಸರಿ ಪಡಿಸುವದರಲ್ಲಿ ಯಾವುದನ್ನಾದರೂ ಕೇಳಿ ಕೊಂಡರೆ, ಅವನ ಪ್ರಶ್ನೆಗಳಿಗೆ ಉತ್ತರ ಕೊಡುವಂತೆ, ಅವನ ಆಸಕ್ತಿಯನ್ನು ಪುನರುಜ್ಜೀವನಗೊಳಿಸುವಂತೆ, ಅವನ ನಂಬಿಕೆಯನ್ನು ಕಟ್ಟುವಂತೆ ಹಾಗೂ ಅವನ ಭರವಸೆಯನ್ನು ಪುನಃ ಸ್ಥಾಪಿಸುವಂತೆ, ಅದನ್ನು ಅವನಿಗೆ ಪೂರೈಸಿರಿ. ಮೇಲ್ವಿಚಾರಕನೊಂದಿಗೆ ವ್ಯವಹರಿಸುವಾಗ, ಅವನು ಮೇಲ್ವಿಚಾರಣೆ ಮಾಡುವವರೊಂದಿಗೆ ಅವನು ವ್ಯವಹರಿಸಬೇಕಾದ ಮಾದರಿಯನ್ನು ತೋರಿಸಿರಿ.

*ಲೆಕ್ಕಾ ಒಪ್ಪಿಸುವದರ ಅಗತ್ಯತೆಯಿರಲಿ.* ಜವಾಬ್ದಾರಿಕೆಯಿರುವಲ್ಲಿ, ಲೆಕ್ಕಾಚಾರ ಒಪ್ಪಿಸುವುದಿರಲ್ಲಿ, ಕಾರ್ಯಕ್ರಮಗಳ ಮೇಲೆ ನೇಮಿಸಲ್ಪಟ್ಟವರು ಅವರ ಕೆಲಸವನ್ನು ಎಷ್ಟು ಚೆನ್ನಾಗಿ ಮಾಡಿರುವರೊ ಇಲ್ಲವೇ ಮಾಡಿರುವದಿಲ್ಲ ಎಂಬುದರ ಬಗ್ಗೆ ಸಭೆಗೆ ವರದಿ ಒಪ್ಪಿಸಬೇಕು, ಲೆಕ್ಕಾ ಕೊಡಬೇಕು. ಕೆಲಸವನ್ನು ಸ್ವೀಕರಿಸುವವನು ಪ್ರಾರಂಭದಿಂದ ತಾನು ತನ್ನ ಮನೆ ವಾರ್ತೆಯ ಬಗ್ಗೆ ಲೆಕ್ಕ ಕೊಡಲು ಕೇಳಲ್ಪಡುವನು ಎಂಬುದನ್ನು ಅರ್ಥಮಾಡಿಕೊಳ್ಳತಕ್ಕದ್ದು. ಮುಂದುವರಿದ ಮೇಲ್ವಿಚಾರಣೆಯು ಈ ಲೆಕ್ಕ ಒಪ್ಪಿಸುವಿಕೆಯ ಸತತವಾದ ಜ್ಞಾಪಕವಾಗಿರುವುದು.

## ಮೌಲ್ಯ ಮಾಪನ

ಕಾರ್ಯ ಕ್ರಮಗಳ ಮುಂದುವರಿದ ಮೌಲ್ಯಮಾಪನವು ಸಭೆಯ ನಾಯಕರಿಂದ ಸಭೆಯಲ್ಲಿ ಅಗತ್ಯವಾದದ್ದಾಗಿದೆ. ಒಂದು ಕಾರ್ಯಕ್ರಮವು ನಿರೀಕ್ಷೆಗೆ ತಕ್ಕಂತೆ ಇರದಿದ್ದರೆ, ಯಾಕೆ ಎಂಬುದನ್ನು ಅವರು ಕಂಡು ಹಿಡಿಯತಕ್ಕದ್ದು. ಸಮಸ್ಯೆಯನ್ನು ಗುರುತಿಸಬಹುದೋ? ಈ ಪರಿಸ್ಥಿತಿಯಲ್ಲಿ ಈ ವಿಧಾನವು ಸುಮ್ಮನೇ ಕಾರ್ಯಮಾಡುವದಿಲ್ಲವೇ? ಕ್ರೈಸ್ತರಿಗೆ ಬದಲಾಗದ ಸಂದೇಶವಿದ್ದರೂ, ವಿಧಾನಗಳು ಯಾವಾಗಲೂ ಬದಲಾಗುವಂಥವುಗಳಾಗಿವೆ ಎಂಬುದನ್ನು ಬುದ್ಧಿವಂತ ನಾಯಕರು ತಿಳಿದಿರುವರು. ಒಂದು ಸಮಯದಲ್ಲಿ ಕಾರ್ಯಮಾಡುವಂಥದ್ದು ಇನ್ನೊಂದು ಸಮಯದಲ್ಲಿ ಕಾರ್ಯ ಮಾಡಲಿಕ್ಕಿಲ್ಲ. ಸಭೆಯು ತನ್ನ ನಿಯೋಗವನ್ನು ಪೂರ್ತಿಗೊಳಿಸಲು ಹುಡುಕುವಂಥದ್ದರಿಂದ ನಾಯಕರು ವಿಧಾನಗಳನ್ನು ಬದಲಾಯಿಸಲು ಕಲಿಯತಕ್ಕದ್ದು.

## ಮುಕ್ತಾಯ

ಸಭೆಯ ಕೆಲಸದ ಮೇಲ್ವಿಚಾರಣೆಯು ಹೇಗೆ ತೀರ್ಪು ಹೊಂದಲ್ಪಡಬಹುದು? ಒಂದು ಅರ್ಥದಲ್ಲಿ, ವ್ಯಾಪಾರಿ ವ್ಯವಸ್ಥಾಪನೆಯ ಅದೇ ವಿಧಾನದಲ್ಲಿ - ಪರಿಣಾಮಗಳಿಂದ ತೀರ್ಮಾನಿಸತಕ್ಕದ್ದು. "ಯಾವು ಕೆಳಗಿನ ಸಾಲು ಆಗಿರುತ್ತದೆ? ನಾವು ಲಾಭವನ್ನು ಮಾಡಿಕೊಂಡೆವೋ?" ಎಂದು ವ್ಯಾಪಾರವು ತನ್ನ ಮ್ಯಾನೇಜರುಗಳನ್ನು ಕೇಳುತ್ತದೆ. ಹಾಗಿದ್ದರೆ ಮ್ಯಾನೇಜ್‌ಮೆಂಟ್ ಚೆನ್ನಾಗಿತ್ತು; ಇಲ್ಲದಿದ್ದರೆ, ಮ್ಯಾನೇಜ್‌ಮೆಂಟ್ ಕೆಟ್ಟದ್ದಾಗಿತ್ತು.

"ಜನರು ರಕ್ಷಿಸಲ್ಪಟ್ಟರೋ? ರಕ್ಷಿಸಲ್ಪಟ್ಟವರು ಬೋಧಿಸಲ್ಪಟ್ಟರೋ? ದೇವರು ಸ್ತೋತ್ರ ಹೊಂದಿ ಮಹಿಮೆಪಡಿಸಲ್ಪಟ್ಟನೋ?" ಎಂಬುದಾಗಿ ಮೇಲ್ವಿಚಾರಣೆ ಮಾಡುತ್ತಿರುವವರಿಗೆ ಸಭೆಯು ಕೇಳತಕ್ಕದ್ದು. ಇನ್ನೊಂದು ಅರ್ಥದಲ್ಲಿ, ಪ್ರತಿಯೊಂದು ಆತ್ಮವು ಅಮೂಲ್ಯವಾದದ್ದರಿಂದ, ಸಭೆಯು ಹೀಗೆ ಕೇಳತಕ್ಕದ್ದು; "ಡೆಬ್ಬಿಯು ಮಾರ್ಪಟ್ಟಳೋ, ಆಗ ಆಕೆ ಸಭೆಯ ಪ್ರಮುಖ ಭಾಗವಾದಳೋ"; "ತೋಮನು ಒಂದು ವರ್ಷದ ಹಿಂದಿಗಿಂತ ಈಗ ಹೆಚ್ಚು ನಂಬಿಗಸ್ತ ಕ್ರೈಸ್ತನಾಗಿರುವನೋ?"; "ಸೂ ಕರ್ತನಿಗೆ ಹೆಚ್ಚು ನಿಕಟವಾಗಿರುವ ರೀತಿಯಲ್ಲಿ ಆಕೆ ತನ್ನ ಸಮಸ್ಯೆಗಳನ್ನು ಬಗೆ ಹರಿಸಿಕೊಳ್ಳುವಂತೆ ನಾವು ಸಹಾಯ ಮಾಡಿದೆವೋ?"

ಮೇಲ್ವಿಚಾರಣೆಯಲ್ಲಿ ಇರುವವರು, ಸಭೆಯ ಕಾರ್ಯವು ಪರಿಣಾಮಕಾರಿಯಾಗಿ ಮಾಡಿಸಲ್ಪಡಬೇಕೆಂಬುದರ ಬಗ್ಗೆ ತಾವು ಮಾತ್ರವೇ ಚಿಂತಿಸುವವರಾಗಿರಲಿಲ್ಲ. ಅವರು ತಮ್ಮೊಂದಿಗೆ ಕೆಲಸ ಮಾಡುವವರೊಂದಿಗೂ ಸಂಬಂಧಿಸಿದವರಾಗಿದ್ದರು. ತಾವು ಒಳಗೊಂಡಿರುವ ಕೆಲಸವು ಆತ್ಮಿಕ ಬೆಳವಣಿಗೆಗಾಗಿ ಒಂದು ಅವಕಾಶದಂತೆ ಹುಡುಕಬೇಕಾಗಿತ್ತು. ಹಸಿದವರಿಗೆ ಊಟ ಬಡಿಸುವ ಒಂದು ಕಾರ್ಯ ಕ್ರಮವು, ಉದಾಹರಣಾರ್ಥವಾಗಿ, ಕೆಲವರ ಹೊಟ್ಟೆಗಳನ್ನು ತುಂಬಿಸುವುದು ಮಾತ್ರವಲ್ಲದೆ, ಅದರಿಂದ ಕ್ರೈಸ್ತರು ಒಂದು ಕಾರ್ಯಕ್ರಮದಲ್ಲಿ ಒಳಗೊಳ್ಳುವವರು ಹೆಚ್ಚಾಗಿ ಕ್ರಿಸ್ತನಂತಾಗಬೇಕೆಂದು ಅಪೇಕ್ಷಿಸುವರು. ಕಾರ್ಯಕ್ರಮ ನಡಿಸುವವನು "ಗುಲಾಮರನ್ನು ಓಡಿಸುವವನು" ಆಗಿದ್ದರೆ, ಇಲ್ಲವೇ ಅವನು ತನ್ನ ಜೊತೆ ಕೆಲಸದವರನ್ನು ಕಡಿಮೆಯಾಗಿ ಕಾಣುವವನಾಗಿದ್ದರೆ, ಕಾರ್ಯಕ್ರಮವು ಸಭೆಗೆ ಸಹಾಯಕ್ಕಿಂತ ಹೆಚ್ಚಾಗಿ ಆತಂಕ ಕಾರಿಯಾದದ್ದಾಗುವುದು.

ಸಭೆಯ ಯಾವುದೇ ಕಾರ್ಯ ಕ್ರಮದಲ್ಲಿ ಮೇಲ್ವಿಚಾರಣೆ ಮಾಡುವ ನಾಯಕನು, ಅವನು ಬೈಬಲ್ ಸ್ಕೂಲಿನೊಂದಿಗೆ ಕೆಲಸ ಮಾಡಲಿ ಇಲ್ಲವೇ ಕಟ್ಟಡವನ್ನು ಸ್ವಚ್ಛ ಮಾಡುವವನಾಗಿರಲಿ, ಸಭೆಯ ಅಂತಿಮ ಗುರಿಯನ್ನು ಮನಸ್ಸಿನಲ್ಲಿಟ್ಟು ಕೊಳ್ಳತಕ್ಕದ್ದು. ಒಬ್ಬ ಜೊತೆ ಕ್ರೈಸ್ತನು ಕ್ರಿಸ್ತನ ಕಡೆಗೆ ಎಳೆಯಲ್ಪಡುವದರ ಬದಲು, ಕ್ರಿಸ್ತನಿಂದ ದೂರ ಓಡಿಸಲ್ಪಟ್ಟರೆ, ಅನಾವಶ್ಯಕವಾಗಿ ಮನನೋಯಿಸಲ್ಪಟ್ಟವನಾದರೆ, ಅವನು ಕೆಲಸವನ್ನು ಚೆನ್ನಾಗಿ ಮೇಲ್ವಿಚಾರಣೆ ಮಾಡುತ್ತಿರುವದಿಲ್ಲ.